1

# ಪರಿಶುದ್ಧಾತ್ಮನು ಯಾರು?

*"ಆಗ ನಾನು ತಂದೆಯನ್ನು ಕೇಳಿಕೊಳ್ಳುವೆನು; ಆತನು ನಿಮಗೆ ಬೇರೊಬ್ಬ ಸಹಾಯಕನನ್ನು ಸದಾಕಾಲ ನಿಮ್ಮ ಸಂಗಡ ಇರುವದಕ್ಕೆ ಕೊಡುವನು. ಆ ಸಹಾಯಕನು ಯಾರಂದರೆ ಸತ್ಯದ ಆತ್ಮನೇ. ಲೋಕವು ಆತನನ್ನು ನೋಡದೆಯೂ ತಿಳಿಯದೆಯೂ ಇರುವದರಿಂದ ಆತನನ್ನು ಹೊಂದಲಾರದು, ನೀವು ಆತನನ್ನು ಬಲ್ಲಿರಿ; ಹೇಗಂದರೆ ನಿಮ್ಮ ಬಳಿಯಲ್ಲಿ ವಾಸ ಮಾಡುತ್ತಾನೆ, ಮತ್ತು ನಿಮ್ಮೊಳಗೆ ಇರುವನು. ನಾನು ನಿಮ್ಮನ್ನು ಅನಾಥರಾಗಿ ಬಿಡುವದಿಲ್ಲ: ನಿಮ್ಮ ಬಳಿಗೆ ಬರುತ್ತೇನೆ" (ಯೋಹಾನ 14:16-18).*

"ಪರಿಶುದ್ಧಾತ್ಮನು *ಏನಾಗಿದ್ದಾನೆ?*" ಎಂಬುದು ಪ್ರಶ್ನೆಯಲ್ಲ, ಆದರೆ "ಪರಿಶುದ್ಧಾತ್ಮನು *ಯಾರಾಗಿದ್ದಾನೆ?*" ಎಂಬುದು ಪ್ರಶ್ನೆಯಾಗಿದೆ. ಪರಿಶುದ್ಧಾತ್ಮನು ಒಬ್ಬ ಜೀವಿಯು, ವ್ಯಕ್ತಿತ್ವದೊಂದಿಗೆ ಒಬ್ಬ ವ್ಯಕ್ತಿಯು ಆಗಿದ್ದರಿಂದ ಈ ಪ್ರಶ್ನೆಯಿರುತ್ತದೆ. ಆತನು ಒಂದು ಶಕ್ತಿ ಇಲ್ಲವೇ ಒಂದು ಬಲಕ್ಕಿಂತ ಹೆಚ್ಚಾಗಿದ್ದಾನೆ; ಆತನು ಜೀವಿಸುವ ಪಾರಲೌಕಿಕ ವ್ಯಕ್ತಿಯಾಗಿದ್ದಾನೆ.

## ಆತನು ಒಬ್ಬ "ಆತ್ಮನು"

ಹಳೇ ಒಡಂಬಡಿಕೆಯಲ್ಲಿ ಹಿಬ್ರೂ ಪದ *ruach* ಎಂಬುದು "ಆತ್ಮ," ಮತ್ತು "ಗಾಳಿ," ಮತ್ತು "ಶ್ವಾಸ," ಹಾಗೆಯೇ "ದೇವರ ಆತ್ಮ" ಎಂದು ಭಾಷಾಂತರಿಸಲ್ಪಟ್ಟಿದೆ. ಮಾನವ ಆತ್ಮಕ್ಕೆ ಸಂಬಂಧಿಸಿಯಾಗಲಿ (1 ಕೊರಿಂಥ 2:11; ನೋಡಿರಿ ಜ್ಞಾನೋಕ್ತಿ 20:27) ಇಲ್ಲವೇ ದೇವರು (ಯೋಹಾನ 4:24) ಹಾಗೂ ದೇವದೂತರು (ಇಬ್ರಿಯ 1:13, 14) ಎಂಬಂಥ ದೈವಿಕ ಜೀವಿಗಳಿಗೆ ಸಂಬಂಧಿಸಿಯಾಗಲಿ ಹೊಸ ಒಡಂಬಡಿಕೆಯಲ್ಲಿ ಅದರ ಸಮನಾದ ಗ್ರೀಕ ಪದ, *pneuma* ಎಂಬುದು "ಆತ್ಮ"ನಿಗಾಗಿ ಉಪಯೋಗಿಸಲ್ಪಟ್ಟಿದೆ. ಕೆಲವು ಸಲ "ಆತ್ಮ" ಎಂಬ ಪದವು ದೇವರ ಮುಂದೆ ನಿಂತುಕೊಂಡು, ಆತನಿಗೆ ಮಾತನಾಡಿದವೆಂದು ಹೇಳಲ್ಪಟ್ಟ (1 ಅರಸುಗಳು 22:21) ಆತ್ಮದಂಥ ಪಾರಲೌಕಿಕ ಜೀವಿಗಳಿಗೆ ಸಂಬಂಧಿಸಿದೆ. "spirit" ಎಂದು "ಭಾಷಾಂತರಿಸಲ್ಪಟ್ಟ ಹೀಬ್ರು ಮತ್ತು ಗ್ರೀಕ ಪದಗಳು *ruach* ಮತ್ತು *pneuma* ಇವೆರಡೂ ಅಕ್ಷರಶಃವಾಗಿ 'ಗಾಳಿ, ಶ್ವಾಸ' ಎಂದು ಅರ್ಥಕೊಡುತ್ತವೆ, ಇವೆರಡೂ ಜೀವಿಸುವ ಜೀವಿಗಳ ಅದೃಶ್ಯವಾಸ್ತವಿಕತೆಗೆ, ವಿಶೇಷವಾಗಿ ದೇವರು ಮತ್ತು ಮನುಷ್ಯನಿಗಾಗಿ ಉಪಯೋಗಿಸಲ್ಪಟ್ಟಿವೆ."[1]

ಹೊಸ ಒಡಂಬಡಿಕೆಯಲ್ಲಿ - ಯೋಹಾನ 3:8ರಲ್ಲಿ ಬಿಟ್ಟು, ಎಲ್ಲಾ ವಿಷಯಗಳಲ್ಲಿ *pneuma* ಎಂಬುದು "ಆತ್ಮ" ಎಂದು ಭಾಷಾಂತರಿಸಲ್ಪಟ್ಟಿದೆ. ಯೋಹಾನ 3:8ರಲ್ಲಿ ಹೆಚ್ಚಾದ ಭಾಷಾಂತರಗಳಲ್ಲಿ "ಗಾಳಿ" ಯಂತೆ ಕಂಡು ಬರುತ್ತದೆ. ಅಲ್ಲಿಯೂ ಸಹ "ಆತ್ಮ" ಎಂಬುದು ಅಪೇಕ್ಷಿಸಲ್ಪಟ್ಟಿದೆ. ಈ ವಚನವನ್ನು ಕುರಿತು James Oliver Buswell Jr. ಹೀಗೆ ಹೇಳಿದ್ದಾರೆ: ಒಂದು ವಾಕ್ಯ ಭಾಗದಲ್ಲಿ ಯಾದರು (ಯೋಹಾನ 3:8) ವ್ಯಾಖ್ಯಾನವು ಸಂಶಯಾಸ್ಪದವಾದದ್ದಾಗಿದೆ, ಆದರೆ ಈ ವಚನವು "ಆತ್ಮನು ತಾನಾಯ್ದುಕೊಳ್ಳುವ

ಕಡೆಗೆ ಉಸಿರುತ್ತಾನೆ ...'' ಎಂದು ಹೆಚ್ಚು ಚೆನ್ನಾಗಿ ಭಾಷಾಂತರಿಸಬಹುದು.[2]

Guy N. Woods ಹೀಗೆ ಬರೆದಿದ್ದಾನೆ,

> *Pneuma* (ಆತ್ಮ) ಎಂಬ ಪದವು ಗ್ರೀಕ ಹೊಸ ಒಡಂಬಡಿಕೆಯಲ್ಲಿ ಹಲವು ನೂರು ಸಲ ಬರುತ್ತದೆ. ಬೇರೆ ಯಾವುದೇ ಸಂದರ್ಭದಲ್ಲಿ ಉತ್ತಮವಾದ ಭಾಷಾಂತರಗಳು ಅದನ್ನು ಗಾಳಿ ಎಂದು ಹೇಳಿರುವುದಿಲ್ಲ. ಅದು ಈ ವಾಕ್ಯದಲ್ಲಿ ಎರಡು ಸಲ ಬರುತ್ತದೆ ಹಾಗೂ ಮೊದಲನೆಯ ವಾಕ್ಯಾಂಗದಲ್ಲಿ "ಗಾಳಿ'' ಎಂದು ಹೇಳಲ್ಪಟ್ಟಿದೆ ಮತ್ತು ಕೊನೆಯದರಲ್ಲಿ 'ಆತ್ಮ' ಎಂದಿದೆ. ಅಂತಿಮ ವಾಕ್ಯಾಂಗ ವನ್ನು ಮೊದಲನೆಯ ವಾಕ್ಯಾಂಗವನ್ನು 'ಗಾಳಿಯು ಬೀಸುತ್ತದೆ ...' ಎಂದು ಭಾಷಾಂತರಿಸುವಂತೆ "ಹಾಗೆಯೇ ಗಾಳಿಯಿಂದ ಹುಟ್ಟಿದ ಪ್ರತಿಯೊಬ್ಬನಿಗೆ ಇರುವುದು ಎಂದು ಭಾಷಾಂತರಿಸುವುದು ಇನ್ನೊಂದು ತಪ್ಪಾಗಿರಲಾರದು.''[3]

ಆತ್ಮವು ದೇವರು ನಮ್ಮೊಳಗೆ ಇಡುವ (ಜೆಕರ್ಯ 12:1; ಪ್ರಸಂಗಿ 12:7) ಮತ್ತು ಮರಣದಲ್ಲಿ ದೇಹದಿಂದ ಅಗಲಿ ಹೋಗುವ (ಪ್ರಸಂಗಿ 12:7; ಯಾಕೋಬ 2:26) ದೇವರ ಆಂತರಿಕ ಕಿಡಿಯಾಗಿರಬಹುದು. ಅದು ಒಂದು ಮನೋಭಾವನೆಯಾಗಿರಬಹುದು (ರೋಮಾಪುರ 8:15; 1 ಕೊರಿಂಥ 4:21; ಗಲಾತ್ಯ 6:1) ಇಲ್ಲವೇ ದೇಹರಹಿತ ಜೀವಿಯಾಗಿರಬಹುದು (ಎಫೆಸ 2:2; 2 ಥೆಸಲೊನೀಕ 2:2). ಆತ್ಮನ ದೇಹರಹಿತ ಸ್ವಭಾವವನ್ನು ಯೇಸುವು ಸೂಚಿಸಿದ್ದಾನೆ: "ನನ್ನ ಕೈಗಳನ್ನೂ ನನ್ನ ಕಾಲುಗಳನ್ನೂ ನೋಡಿರಿ; ನಾನೇ ಅಲ್ಲವೇ. ನನ್ನನ್ನು ಮುಟ್ಟಿನೋಡಿರಿ. ನಿಮಗೆ ಕಾಣುವ ಪ್ರಕಾರ ನನಗೆ ಮಾಂಸವೂ ಎಲುಬುಗಳೂ ಉಂಟು'' (ಲೂಕ 24:39). ಆತ್ಮವು ದೇವರಂತೆ (ಯೋಹಾನ 4:24), ಮಾನವ ಕಣ್ಣುಗಳಿಂದ ನೋಡಲ್ಪಡಲಿಕ್ಕಾಗುವದಿಲ್ಲ (1 ತಿಮೊಥೆ 6:16) ಯಾಕಂದರೆ ಆತ್ಮಗಳು ಆತ್ಮಿಕ ಆಯಾಮದಲ್ಲಿ, ದೈಹಿಕವಲ್ಲದ ಆಯಾಮದಲ್ಲಿ ಅಸ್ತಿತ್ವದಲ್ಲಿರುತ್ತವೆ (2 ಕೊರಿಂಥ 4:18) ಹಾಗೂ ದುಷ್ಟ ಆತ್ಮಗಳು (ಇಬ್ರಿಯ 1:13, 14), ದೆವ್ವಗಳು ಎಂದೂ ತಿಳಿಯಲ್ಪಟ್ಟವುಗಳು (ಮಾರ್ಕ 5:2, 15) ಸೈತಾನನ ದೂತರುಗಳಾಗಿದ್ದಾರೆ (ಮತ್ತಾಯ 25:41).

## ಆತನು ಒಬ್ಬ "ವ್ಯಕ್ತಿಯಾಗಿದ್ದಾನೆ''

ಬೈಬಲಿನಲ್ಲಿ ಲಭ್ಯವಿರುವ ಎಲ್ಲಾ ಮಾಹಿತಿಯು ಪರಿಶುದ್ಧಾತ್ಮನು ದೈವಿಕ ವ್ಯಕ್ತಿಯಾಗಿದ್ದಾನೆ ಎಂಬ ಸಂಗತಿಯ ಕಡೆಗೆ ತೋರಿಸುತ್ತದೆ. ತಂದೆ ಮತ್ತು ಕುಮಾರನಿಗೆ ಇರುವ ಅದೇ ವೈಯಕ್ತಿಕ ಗುಣಲಕ್ಷಣಗಳು ಆತನಿಗೂ ಇರುತ್ತವೆ.

### ಒಬ್ಬ ವ್ಯಕ್ತಿಯ ಗುಣಧರ್ಮಗಳು

ಪರಿಶುದ್ಧಾತ್ಮನ ಗುಣಧರ್ಮಗಳು ಕೇವಲ ಒಂದು ಬಲವಾಗಿರುವ ಬದಲು ಆತನು ಜೀವಿಸುವ ವ್ಯಕ್ತಿ, ಒಬ್ಬ ವ್ಯಕ್ತಿ ಆಗಿದ್ದಾನೆಂದು ತೋರಿಸುತ್ತವೆ:

1. *ತೀರ್ಪು*: "ಪರಿಶುದ್ಧಾತ್ಮನಿಗೂ ... ವಿಹಿತವಾಗಿ ತೋರಿತು'' (ಅಪೊಸ್ತಲರ ಕೃತ್ಯ 15:28ಎ).

2. *ಮನಸ್ಸು*: "ಆದರೆ ಹೃದಯಗಳನ್ನು ಶೋಧಿಸಿ ನೋಡುವಾತನಿಗೆ ಪರಿಶುದ್ಧಾತ್ಮನ ಮನೋಭಾವವು ಏನೆಂದು ತಿಳಿದದೆ'' (ರೋಮಾಪುರ 8:27ಎ).

3. *ಚಿತ್ತ*: “ಈ ವರಗಳನ್ನೆಲ್ಲಾ ಆ ಒಬ್ಬ ಆತ್ಮನೇ ತನ್ನ ಚಿತ್ತಕ್ಕೆ ಬಂದಹಾಗೆ ಒಬ್ಬೊಬ್ಬನಿಗೆ ಹಂಚಿಕೊಟ್ಟು ನಡಿಸುತ್ತಾನೆ” (1 ಕೊರಿಂಥ 12:11). ಇಬ್ರಿಯ 2:4ರ ಪ್ರಕಾರ ಪರಿಶುದ್ಧಾತ್ಮನ ವರಗಳು ದೇವರ ಚಿತ್ತಕ್ಕೆ ಅನುಸಾರವಾಗಿ ಕೊಡಲ್ಪಡುತ್ತವೆ.

4. *ತಿಳುವಳಿಕೆ*: “ಹಾಗೆಯೇ ದೇವರ ಆಲೋಚನೆಗಳನ್ನು ದೇವರ ಆತ್ಮನೇ ಹೊರತು ಬೇರೆ ಯಾರೂ ಗ್ರಹಿಸುವದಿಲ್ಲ” (1 ಕೊರಿಂಥ 2:11ಬಿ).

5. *ಮನೋಭಾವಗಳು* (ಪ್ರೀತಿ, ದುಃಖ, ಆನಂದ): “ಸಹೋದರರೇ, ನೀವು ನನಗೋಸ್ಕರ ದೇವರ ಮುಂದೆ ಮಾಡುವ ಪ್ರಾರ್ಥನೆಗಳಲ್ಲಿ ನನ್ನೊಂದಿಗೆ ಬಲೀಯವಾಗಿ ವಿಜ್ಞಾಪಿಸಿಕೊಳ್ಳಬೇಕೆಂದು ನಮ್ಮ ಕರ್ತನಾದ ಯೇಸು ಕ್ರಿಸ್ತನ ನಿಮಿತ್ತವಾಗಿಯೂ ಪರಿಶುದ್ಧಾತ್ಮನಿಂದಾಗುವ ಪ್ರೀತಿಯ ನಿಮಿತ್ತವಾಗಿಯೂ ನಿಮ್ಮನ್ನು ಬೇಡಿಕೊಳ್ಳುತ್ತೇನೆ” (ರೋಮಾಪುರ 15:30); “ದೇವರ ಪರಿಶುದ್ಧಾತ್ಮನನ್ನು ದುಃಖಪಡಿಸಬೇಡಿರಿ; ಆತನಲ್ಲಿಯೇ ವಿಮೋಚನೆಯ ದಿನಕ್ಕಾಗಿ ಮುದ್ರೆ ಹೊಂದಿದ್ದೀರಲ್ಲಾ” (ಎಫೆಸ 4:30): “ಇದಲ್ಲದೆ ನೀವು ಬಹಳ ಹಿಂಸೆಯನ್ನು ಅನುಭವಿಸಬೇಕಾಗಿದ್ದರೂ ಪರಿಶುದ್ಧಾತ್ಮನಿಂದುಂಟಾದ ಆನಂದದೊಡನೆ ದೇವರ ವಾಕ್ಯವನ್ನು ಅಂಗೀಕರಿಸಿ ನಮ್ಮನ್ನೂ ಕರ್ತನಾದ ಯೇಸುವನ್ನೂ ಅನುಸರಿಸುವವರಾದಿರಿ” (1 ಥೆಸಲೊನೀಕ 1:6).

ಪರಿಶುದ್ಧಾತ್ಮನಿಗೆ ಈ ಗುಣಧರ್ಮಗಳಿರುವ ಸಂಗತಿಯು ಆತನು ಒಬ್ಬ ವ್ಯಕ್ತಿಯಾಗ್ದಿನೆಂಬುದನ್ನು ಪ್ರಕಟಿಸುತ್ತದೆ.

**ಒಬ್ಬ ವ್ಯಕ್ತಿಯ ಚಟುವಟಿಕೆಗಳು**

ಪರಿಶುದ್ಧಾತ್ಮನು ಕೇವಲ ಒಂದು ಬಲದಂತೆ ಅಲ್ಲ ಆದರೆ ಒಬ್ಬ ವ್ಯಕ್ತಿಯಂತೆ ವರ್ತಿಸುತ್ತಾನೆ, ಆತನು ಈ ಕೆಳಗಿನವುಗಳನ್ನು ಮಾಡಬಲ್ಲನು:

1. *ಬೋಧಿಸುವುದು ಮತ್ತು ಜ್ಞಾಪಿಸುವುದು*: “ಆದರೆ ಆ ಸಹಾಯಕನು ಅಂದರೆ ನನ್ನ ಹೆಸರಿನಲ್ಲಿ ತಂದೆಯು ಕಳುಹಿಸಿ ಕೊಡುವ ಪರಿಶುದ್ಧಾತ್ಮನೇ ನಿಮಗೆ ಎಲ್ಲವನ್ನೂ ಉಪದೇಶಿಸಿ ನಾನು ನಿಮಗೆ ಹೇಳಿದ್ದನ್ನೆಲ್ಲಾ ನಿಮ್ಮ ನೆನಪಿಗೆ ತರುವನು” (ಯೋಹಾನ 14:26).

2. *ಸಾಕ್ಷಿಕೊಡುವುದು*: “ತಂದೆಯ ಬಳಿಯಿಂದ ನಾನು ನಿಮಗೆ ಕಳುಹಿಸಿ ಕೊಡುವ ಸಹಾಯಕನು ಅಂದರೆ ತಂದೆಯ ಬಳಿಯಿಂದ ಹೊರಡುವ ಸತ್ಯದ ಆತ್ಮನು ಬಂದಾಗ ಆತನು ನನ್ನನ್ನು ಕುರಿತು ಸಾಕ್ಷಿ ಹೇಳುವನು” (ಯೋಹಾನ 15:26).

3. *ಸತ್ಯದಲ್ಲಿ ನಡಿಸುವುದು*: “ಸತ್ಯದ ಆತ್ಮನು ಬಂದಾಗ, ಆತನು ನಿಮ್ಮನ್ನು ನಡಿಸಿಕೊಂಡು ಹೋಗಿ ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವನು” (ಯೋಹಾನ 16:13ಎ).

4. *ಮಾತನಾಡುವುದು*: “ಆತನು ತನ್ನಷ್ಟಕ್ಕೆ ತಾನೇ ಮಾತಾಡುವದಿಲ್ಲ” (ಯೋಹಾನ 16:13ಬಿ; ನೋಡಿರಿ ಅಪೊಸ್ತಲರ ಕೃತ್ಯ 8:29; 11:12; 1 ತಿಮೊಥೆ 4:1).

5. *ಕೇಳುವುದು*: “ಆದರೆ ಕೇಳಿದ ಮಾತುಗಳನ್ನೆ ಮಾತಾಡುವನು” (ಯೋಹಾನ 16:13ಎ).

6. *ತಿಳಿಸುವುದು*: “ಮುಂದಾಗುವ ಸಂಗತಿಗಳನ್ನು ತಿಳಿಸುವನು” (ಯೋಹಾನ 16:13ಡಿ).

7. *ತಡೆಯುವುದು*: “ಆಸ್ಯ ಸೀಮೆಯಲ್ಲಿ ವಾಕ್ಯವನ್ನು ಹೇಳಬಾರದೆಂದು ಪರಿಶುದ್ಧಾತ್ಮನು ತಡೆದದ್ದರಿಂದ ಅವರು ಫ್ರುಗ್ಯ ಗಲಾತ್ಯ ಸೀಮೆಯನ್ನು ಹಾದು ಹೋಗಿ

ಮೂಸ್ಯಕ್ಕೆ... ಪ್ರಯತ್ನ ಮಾಡಿದರು" (ಅಪೊಸ್ತಲರ ಕೃತ್ಯ 16:6).

8. *ಜೀವ ಕೊಡುವುದು*: "ಕ್ರಿಸ್ತ ಯೇಸುವನ್ನು ಸತ್ತವರೊಳಗಿಂದ ಎಬ್ಬಿಸಿದಾತನು ನಿಮ್ಮಲ್ಲಿ ವಾಸವಾಗಿರುವ ತನ್ನ ಆತ್ಮನ ಮೂಲಕ ನಿಮ್ಮ ಮರ್ತ್ಯ ದೇಹಗಳನ್ನು ಸಹ ಬದುಕಿಸುವನು" (ರೋಮಾಪುರ 8:11ಬಿ).

9. *ಪ್ರಕಟಿಸುವುದು*: "ನಮಗಾದರೋ ದೇವರು ತನ್ನ ಆತ್ಮನ ಮೂಲಕ ಅದನ್ನು ಪ್ರಕಟಿಸಿದನು" (1 ಕೊರಿಂಥ 2:10ಎ; ನೋಡಿರಿ ಎಫೆಸ 3:3-5).

10. *ಹುಡುಕುವುದು*: "ಆ ಆತ್ಮನು ಎಲ್ಲಾ ವಿಷಯಗಳನ್ನು, ದೇವರ ಅಗಾಧವಾದ ವಿಷಯಗಳನ್ನು ಕೂಡ ಪರಿಶೋಧಿಸುವವನಾಗಿದ್ದಾನೆ" (1 ಕೊರಿಂಥ 2:10ಬಿ).

11. *ವಾಗ್ದಾನ*: "ಅಬ್ರಹಾಮನಿಗೆ ಉಂಟಾದ ಆಶೀರ್ವಾದವು ಕ್ರಿಸ್ತ ಯೇಸುವಿನಲ್ಲಿ ಅನ್ಯ ಜನರಿಗೆ ಉಂಟಾಗುವಂತೆಯೂ ದೇವರು ವಾಗ್ದಾನ ಮಾಡಿದ ಆತ್ಮನು ನಮಗೆ ನಂಬಿಕೆಯ ಮೂಲಕ  ದೊರಕುವಂತೆಯೂ ..." (ಗಲಾತ್ಯ 3:14; ನೋಡಿರಿ ಅಪೊಸ್ತಲರ ಕೃತ್ಯಗಳು 2:33).

12. *ಅನ್ಯೋನ್ಯತೆ:* "ನಮ್ಮ ಕರ್ತನಾದ ಯೇಸು ಕ್ರಿಸ್ತನ ಕೃಪೆಯೂ ದೇವರ ಪ್ರೀತಿಯೂ ಪರಿಶುದ್ಧಾತ್ಮನ ಅನ್ಯೋನ್ಯತೆಯೂ ನಿಮ್ಮೆಲ್ಲರ ಸಂಗಡವಿರಲಿ" (2 ಕೊರಿಂಥ 13:14; ನೋಡಿರಿ ಫಿಲಿಪ್ಪಿ 2:1).

13. *ಬೇಡಿಕೊಳ್ಳುವುದು*: "... ಪರಿಶುದ್ಧಾತ್ಮನು ತಾನೇ ಮಾತಿಲ್ಲದಂಥ ನರಳಾಟದಿಂದ ನಮಗೋಸ್ಕರ ಬೇಡಿಕೊಳ್ಳುತ್ತಾನೆ ... ಆ ಆತ್ಮನು ದೇವರ ಚಿತ್ತಾನುಸಾರವಾಗಿ ದೇವಜನರಿಗೋಸ್ಕರ ಬೇಡಿಕೊಳ್ಳುವನು ..." (ರೋಮಾಪುರ 8:26, 27).

14. *ಸೂಚಿಸುವುದು ಮತ್ತು ಮುಂತಿಳಿಸುವುದು*: "... ತಮ್ಮಲ್ಲಿದ್ದ ಕ್ರಿಸ್ತನ ಆತ್ಮನು ಕ್ರಿಸ್ತನಿಗೆ ಬರಬೇಕಾದ ಬಾಧೆಗಳನ್ನೂ ಅವುಗಳ ತರುವಾಯ ಉಂಟಾಗುವ ಪ್ರಭಾವವನ್ನೂ ಮುಂದಾಗಿ ತಿಳಿಸಿದಾಗ, ..." (1 ಪೇತ್ರ 1:11).

15. *ಆಮಂತ್ರಿಸುವುದು*: "ಆತ್ಮನೂ ಮದಲಗಿತ್ತಿಯೂ - ಬಾ ಅನ್ನುತ್ತಾರೆ" (ಪ್ರಕಟನೆ 22:17ಎ).

16. *ನಡಿಸುವುದು*: "ಯೇಸು ಪರಿಶುದ್ಧಾತ್ಮ ಭರಿತನಾಗಿ ಯೊರ್ದನ್ ಹೊಳೆಯಿಂದ ಹಿಂತಿರುಗಿ ದೇವರಾತ್ಮನಿಂದ ನಡಿಸಲ್ಪಡುತ್ತಾ ..." (ಲೂಕ 4:1). "ಯಾರಾರು ದೇವರ ಆತ್ಮನಿಂದ ನಡಿಸಿಕೊಳ್ಳುತ್ತಾರೋ ಅವರು ದೇವರ ಮಕ್ಕಳು" (ರೋಮಾಪುರ 8:14).

ಕೇವಲ ಬಲವು ಮಾಡದೇ ಇರುವಂಥ ಈ ಚಟುವಟಿಕೆಗಳಲ್ಲಿ ಪ್ರತಿಯೊಂದರಲ್ಲಿ ಒಬ್ಬ ವ್ಯಕ್ತಿಯು ಕಾರ್ಯನಿರತನಾಗಬಹುದು. ಹೀಗೆ ಪರಿಶುದ್ಧಾತ್ಮನು ಒಬ್ಬ ವ್ಯಕ್ತಿಯಂತೆ ನೋಡಲ್ಪಡತಕ್ಕದ್ದು.

**ಆತನನ್ನು ಹೀನೈಸಬಹುದು**

ಪರಿಶುದ್ಧಾತ್ಮನಿಗೆ ಮಾಡಿದ ತಾತ್ಸಾರಗಳನ್ನು ನೋವುಗಳನ್ನೂ ವಿವರಿಸುವದಕ್ಕೆ ಉಪಯೋಗಿಸಿದ ಪದಗಳು ಸಾಮಾನ್ಯವಾಗಿ ನಿರ್ಜೀವ ಬಲಕ್ಕಾಗಲೀ ಇಲ್ಲವೇ ಶಕ್ತಿಗಾಗಲೀ ವಿರುದ್ಧವಾಗಿ ಮಾಡಿದ ತಪ್ಪುಗಳ ಬದಲು ಒಬ್ಬ ವ್ಯಕ್ತಿಯನ್ನು ಹೀನೈಸುವುದಕ್ಕೆ ಸಂಬಂಧಿಸಿದೆ, ಆತನನ್ನು ಈ ರೀತಿಯಲ್ಲಿ ಹೀನೈಸಬಹುದು:

1. *ದೂಷಿಸಲ್ಪಡ ಬಹುದು*: " ... ಪರಿಶುದ್ಧಾತ್ಮ ದೂಷಣೆಗೆ ಕ್ಷಮಾಪಣೆಯಿಲ್ಲ. ... ಪರಿಶುದ್ಧಾತ್ಮನಿಗೆ ವಿರೋಧವಾಗಿ ಮಾತಾಡಿದರೆ ಅವನಿಗೆ ಇಹದಲ್ಲಾಗಲಿ ಪರದಲ್ಲಾಗಲಿ ಕ್ಷಮಿಸಲ್ಪಡುವದಿಲ್ಲ" (ಮತ್ತಾಯ 12:31, 32).

2. *ಸುಳ್ಳು ಹೇಳಲ್ಪಡುವುದು*: "ಆಗ ಪೇತ್ರನು - ಅನನೀಯಾ, ಸೈತಾನನು ನಿನ್ನ

ಹೃದಯದಲ್ಲಿ ತುಂಬಿಕೊಂಡದ್ದೇನು?" (ಅಪೊಸ್ತಲರ ಕೃತ್ಯಗಳು 5:3ಎ).

3. *ಎದುರಿಸಲ್ಪಡ ಬಹುದು*: "ಚಂಡಿಗಳೇ ಮನಶ್ಶುದ್ಧಿಯೂ ಕರ್ಣಶುದ್ಧಿಯೂ ಇಲ್ಲದವರೇ ... ನೀವು ಯಾವಾಗಲೂ ಪರಿಶುದ್ಧಾತ್ಮನನ್ನು ಎದುರಿಸುವವರಾಗಿದ್ದೀರಿ" (ಅಪೊಸ್ತಲರ ಕೃತ್ಯಗಳು 7:51ಎ).

4. *ದುಃಖಪಡಿಸಲ್ಪಡ ಬಹುದು*: "ದೇವರ ಪರಿಶುದ್ಧಾತ್ಮನನ್ನು ದುಃಖಪಡಿಸಬೇಡಿರಿ; ಆತನಲ್ಲಿಯೇ ವಿಮೋಚನೆಯ ದಿನಕ್ಕಾಗಿ ಮುದ್ರೆಹೊಂದಿದ್ದೀರಲ್ಲಾ" (ಎಫೆಸ 4:30).

5. *ಅಪಮಾನಪಡಿಸಲ್ಪಡಬಹುದು ಇಲ್ಲವೇ ತಿರಸ್ಕರಿಸಲ್ಪಡಬಹುದು*: "ದೇವರ ಕೃಪಾವರವಾಗಿರುವ ಆತ್ಮನನ್ನು ತಿರಸ್ಕಾರ ಮಾಡಿದ್ದಾನೋ ..." (ಇಬ್ರಿಯ 10:29).

6. *ನಂದಿಸಲ್ಪಡಬಹುದು*: "ಪರಿಶುದ್ಧಾತ್ಮನನ್ನು ನಂದಿಸಬೇಡಿರಿ" (1 ಥೆಸಲೊನೀಕ 5:19).

ಪರಿಶುದ್ಧಾತ್ಮನನ್ನು ಹೀಗೆ ಹೀನೈಸಬಹುದು ಎಂಬುದನ್ನು ಕುರಿತು ಹೇಳಿದ ಹೇಳಿಕೆಗಳು ಆತನು ಒಬ್ಬ ವ್ಯಕ್ತಿ ಎಂಬುದನ್ನು ಸೂಚಿಸುತ್ತವೆ. ಶಕ್ತಿಗಳ ಇಲ್ಲವೇ ಒತ್ತಡಗಳ ಕೆಟ್ಟದ್ದಾಗಿ ನಡಿಸುವಿಕೆಯು ಮೇಲಿನ ರೀತಿಯಲ್ಲಿ ವಿವರಿಸಲ್ಪಡುವದಿಲ್ಲ; ಪದ್ಯದಲ್ಲಿ ಇಲ್ಲವೇ ಸಾಂಕೇತಿಕ ಹಿನ್ನೆಲೆಯಲ್ಲಿ ವಿವರಿಸಲ್ಪಟ್ಟಿರಬಹುದು. ಈ ವಚನಗಳ ಹಿನ್ನೆಲೆಗಳ ಭಾಷೆಯು ಅಲಂಕಾರಿಕವಾಗಿ ಇರುವವೆಂದು ಸೂಚಿಸುವುದಿಲ್ಲ.

**ಆತನಿಗೆ ಒಂದು ಪ್ರತ್ಯೇಕ ಅಸ್ತಿತ್ವವಿರುವುದು**

ಪರಿಶುದ್ಧಾತ್ಮನು ಒಬ್ಬ ವ್ಯಕ್ತಿಯಾಗಿದ್ದಾನೆ ಎಂಬುದಕ್ಕೆ ಇನ್ನೊಂದು ಸೂಚನೆಯು ಆತನು ತಂದೆ ಮತ್ತು ಕುಮಾರನೊಂದಿಗೆ ಅವರ ಸ್ವಭಾವ ಮತ್ತು ಗುಣವುಳ್ಳವನಾಗಿ ಹೇಳಲ್ಪಟ್ಟಿರುವದಷ್ಟೇ ಅಲ್ಲ, ಆದರೆ ಆತನಿಗೆ ಸ್ವಂತ ಭಿನ್ನವಾದ ಹಾಗೂ ಪ್ರತ್ಯೇಕವಾದ ಅಸ್ತಿತ್ವವು ಇರುವುದು.

ಯೇಸುವು ಬಾಪ್ತಿಸ್ಮ ಹೊಂದಿದಾಗ ಆತನು ಯೇಸುವಿನ ಮೇಲೆ ಇಳಿದು ಬಂದಂತೆ ಹೇಳಲ್ಪಟ್ಟಿದ್ದಾನೆ (ಯೋಹಾನ 1:33). ಕುಮಾರನು ಬಾಪ್ತಿಸ್ಮದ ನೀರಿನಿಂದ ಹೊರಗೆ ಬಂದಾಗ, ಆತ್ಮನು ಯೇಸುವಿನ ಮೇಲೆ ಇಳಿದು ಬಂದನು ಮತ್ತು ತಂದೆಯು ಪರಲೋಕದಿಂದ ಮಾತಾಡಿದನು (ಮತ್ತಾಯ 3:16, 17; ಲೂಕ 3:21, 22). ತಂದೆಯು ಪರಲೋಕದಲ್ಲಿದ್ದನು; ಕುಮಾರನು ಭೂಮಿಯ ಮೇಲೆ ಇದ್ದನು; ಹಾಗೂ ಆತ್ಮನು ಯೇಸುವಿನೊಂದಿಗೆ ಇರಲು ಬಂದನು.

ಒಬ್ಬ ವ್ಯಕ್ತಿಯು ಯೇಸುವಿಗೆ ವಿರುದ್ಧವಾಗಿ ಕೆಟ್ಟದ್ದನ್ನು ಮಾತಾಡಬಹುದು ಹಾಗೂ ಕ್ಷಮಿಸಲ್ಪಡ ಬಹುದು - ಆದರೆ ಅವನು ಪರಿಶುದ್ಧಾತ್ಮನಿಗೆ ವಿರುದ್ಧವಾಗಿ ಮಾತಾಡಿದರೆ, ಅವನು ಕ್ಷಮಿಸಲ್ಪಡಲಾರನು (ಮತ್ತಾಯ 12:32). ಇಬ್ಬರೂ ಒಂದೇ ವ್ಯಕ್ತಿಯಾಗಿದ್ದರೆ ಒಬ್ಬನು ಹೇಗೆ ಯೇಸುವಿಗೆ ವಿರುದ್ಧವಾಗಿ ಮಾತಾಡಬಹುದು ಮತ್ತು ಪರಿಶುದ್ಧಾತ್ಮನಿಗೆ ವಿರುದ್ಧವಾಗಿ ಮಾತಾಡಬಾರದು? ಈ ಬೋಧನೆಯನ್ನು ಕೊಡುವಲ್ಲಿ ಯೇಸು ತಮ್ಮ ಪ್ರತ್ಯೇಕತೆಯನ್ನು ಅರ್ಥಮಾಡಿಕೊಂಡಿದ್ದಿರಬೇಕು.

ಇತರರು ಪರಿಶುದ್ಧಾತ್ಮ ಭರಿತರಾಗಿದ್ದಂತೆ (ಅಪೊಸ್ತಲರ ಕೃತ್ಯ 6:3, 5; 7:55; 11:24). ಯೇಸುವು ಪರಿಶುದ್ಧಾತ್ಮ ಭರಿತನಾಗಿದ್ದನೆಂದು ಹೇಳಲ್ಪಟ್ಟಿದೆ (ಲೂಕ 4:1). ನಿಶ್ಚಯವಾಗಿಯೂ ಅಪೊಸ್ತಲರ ಕೃತ್ಯದಲ್ಲಿಯ ಪರಿಶುದ್ಧಾತ್ಮ ಭರಿತರಾಗಿದ್ದ ಜನರು ಪರಿಶುದ್ಧಾತ್ಮನಂತೆ ಅದೇ ವ್ಯಕ್ತಿಯಾಗಿರಲಿಲ್ಲ ಎಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಯೇಸು ಮತ್ತು ಪರಿಶುದ್ಧಾತ್ಮನು ಪ್ರತ್ಯೇಕವಾಗಿ ಬೇರೆಯಾದ ಜೀವಿಗಳಾಗಿದ್ದರೆಂದು

ಗುರುತಿಸಲ್ಪಡ ತಕ್ಕದ್ದು.

ಯೇಸುವು ಪವಿತ್ರಾತ್ಮನಾಗಿರುವನೆಂದು ಕೆಲವರು ನಂಬುತ್ತಾರೆ. ಹಾಗಿದ್ದರೂ, ಮರಿಯಳಲ್ಲಿ ಯೇಸುವು ಜನಿಸುವದಕ್ಕಿಂತಲೂ ಮೊದಲು ಪವಿತ್ರಾತ್ಮನು ಲೋಕ ದಲ್ಲಿ ಇದ್ದನು. ಯೋಹಾನನು "ತನ್ನ ತಾಯಿಯ ಗರ್ಭದಲ್ಲಿದ್ದಾಗಲೇ" ಪವಿತ್ರಾತ್ಮನು ಅವನಲ್ಲಿದ್ದನು (ಲೂಕ 1:15). ಇದು ಮರಿಯಳು ಪವಿತ್ರಾತ್ಮನ ಮುಖಾಂತರ ಯೇಸುವನ್ನು ಗರ್ಭಧರಿಸುವ ಆರು ತಿಂಗಳಷ್ಟು ಮೊದಲಾಗಿತ್ತು (ನೋಡಿರಿ ಲೂಕ 1:26, 35).

ಪವಿತ್ರಾತ್ಮನು ಇನ್ನೂ ಕೊಡಲ್ಪಟ್ಟಿರುವದಿಲ್ಲ (ಯೋಹಾನ 7:39) ಯಾಕಂದರೆ ಯೇಸುವು ಇನ್ನು ಮಹಿಮೆ ಪಡಿಸಲ್ಪಟ್ಟಿರುವದಿಲ್ಲ ಎಂದು ಯೋಹಾನನು ಬರೆದನು. ಇದು ಯೇಸುವು ತನ್ನ ಅಪೊಸ್ತಲರೊಂದಿಗೆ ಭೂಲೋಕದಲ್ಲಿದ್ದಾಗ ಹೇಳಲ್ಪಟ್ಟಿತು. ಪವಿತ್ರಾತ್ಮನು ಇನ್ನೂ ಕೊಡಲ್ಪಟ್ಟಿರದಿದ್ದರೆ, ಪವಿತ್ರಾತ್ಮನು ಯೇಸುವಿಗಿಂತ ಬೇರೆ ಭಿನ್ನವಾದವನಾಗಿರತಕ್ಕದ್ದು.

ಯೋಹಾನ 14:16ರ ಪ್ರಕಾರ "ಇನ್ನೊಬ್ಬ ಸಹಾಯಕನನ್ನು," ಪವಿತ್ರಾತ್ಮನನ್ನು (ಯೋಹಾನ 14:26) ತಾನು ಅಪೊಸ್ತಲರಿಗೆ ಕಳುಹಿಸುವೆನೆಂದು ಯೇಸುವು ಹೇಳಿದನು. ಯೇಸುವು ತಾನು ಸಹಾಯಕನಾಗಿದ್ದರೆ "ಇನ್ನೊಬ್ಬ" ಸಹಾಯಕನನ್ನು ಹೇಗೆ ಕಳುಹಿಸ ಬಲ್ಲನು? ಹಾಗೆಯೇ, ಪವಿತ್ರಾತ್ಮನೂ ಯೇಸುವೂ ಒಬ್ಬನೇಯಾಗಿದ್ದರೆ ಪವಿತ್ರಾತ್ಮನು "ಇನ್ನೊಬ್ಬ" ಸಹಾಯಕನನ್ನು ಹೇಗೆ ಕಳುಹಿಸುವನು?

"ಇನ್ನೊಬ್ಬ" ಎಂದು ಭಾಷಾಂತರಿಸಲ್ಪಟ್ಟ *allon* ಎಂಬ ಗ್ರೀಕ ಪದವು ಪವಿತ್ರಾತ್ಮನು ಯೇಸುವಾಗಿರುವದಿಲ್ಲ, ಆದರೆ ಆತನಂತೆ ಇನ್ನೊಬ್ಬ ವ್ಯಕ್ತಿ ಎಂಬ ವಿಚಾರವನ್ನು ವ್ಯಕ್ತಪಡಿಸುತ್ತದೆ. A. T. Robertson ಹೀಗೆ ಬರೆದಿದ್ದಾರೆ,

> ಇನ್ನೊಬ್ಬ ಆದರಿಕ (*allon parakleton*), ಅದರಂತಿರುವ ಇನ್ನೊಬ್ಬ (*allon*, *heteron* ಅಲ್ಲ), ತಂದೆಯೊಂದಿಗೆ ನಮ್ಮ paraclete ಸಹಾಯಕನು, ನ್ಯಾಯವಾದಿಯು ಆಗುವ ಯೇಸುವನ್ನು ಬಿಟ್ಟು ಬೇರೆಯವನು (1 ಯೋಹಾನ 2:1, ಹೋಲಿಸು ರೋಮಾಪುರ 8:26ಡಿ).[4]

*Allon*ಗೆ ಸಂಬಂಧಿಸಿ ಅದು "ಸಂಖ್ಯಾ ಭಿನ್ನತೆಯನ್ನು" ವ್ಯಕ್ತಪಡಿಸುತ್ತದೆಂದು Marvin R. Vincent ಬರೆದಿದ್ದಾನೆ.[5] "ಬೇರೊಬ್ಬ ಪದವು *allon* ಎಂದಿದೆ ಮತ್ತು *eteron* ಎಂದಿರುವದಿಲ್ಲ, ಇದರ ಅರ್ಥ ಭಿನ್ನವಾದದ್ದು ಎಂಬುದನ್ನು ಗಮನಿಸಿರಿ. ಕಳುಹಿಸಲ್ಪಡಬೇಕಾದ ನ್ಯಾಯವಾದಿಯು ಕ್ರಿಸ್ತನಿಗಿಂದ ಭಿನ್ನವಾಗಿರುವದಿಲ್ಲ, ಆದರೆ ಆತನಂತೆ ಇರುವ ಇನ್ನೊಬ್ಬನಾಗಿರುವನು" ಎಂದು ಅನಂತರ ಅವನು ಬರೆದನು.[6]

"ಇನ್ನೊಬ್ಬ ಎಂಬ ಪದವು ನನ್ನಂತಿರುವ ಒಬ್ಬನನ್ನು, ನನ್ನ ಸ್ಥಾನವನ್ನು ತೆಗೆದುಕೊಳ್ಳುವವನನ್ನು, ನನ್ನ ಕಾರ್ಯ ಮಾಡುವವನನ್ನು ಸೂಚಿಸುತ್ತದೆ. ಆದುದರಿಂದ ಯೇಸುವು ಒಬ್ಬ ವ್ಯಕ್ತಿಯಾಗಿದ್ದರೆ, ಪವಿತ್ರಾತ್ಮನೂ ಸಹ ಒಬ್ಬ ವ್ಯಕ್ತಿಯಾಗಿರುತ್ತಾನೆ" ಎಂದು William Hendricksen ಬರೆದಿದ್ದಾರೆ.[7] ಪವಿತ್ರಾತ್ಮನು ಯೇಸುವಲ್ಲಿ, ಆತನು ಇನ್ನೊಬ್ಬ ಸಹಾಯಕನು (ಆದರಿಕನು), ಆತನು ಸ್ವಭಾವದಲ್ಲಿ ಯೇಸುವಿಗಿಂತ ಭಿನ್ನವಾಗಿರುವದಿಲ್ಲ, ಆದರೆ ಆತನಂತೆ ಇರುವನು.

ತಾನು ಹೋದ ನಂತರದ ವರೆಗೆ ತಾನು ಆತ್ಮನನ್ನು ಕಳುಹಿಸುವದಿಲ್ಲ ಎಂದು ಯೇಸು ಹೇಳಿದನು (ಯೋಹಾನ 16:7). ಪವಿತ್ರಾತ್ಮನು ತನ್ನಷ್ಟಕ್ಕೆ ತಾನೇ

ಮಾತಾಡುವದಿಲ್ಲ, ಆದರೆ ಯೇಸುವಿನಿಂದ ಕೇಳಿದ್ದನ್ನು ಮಾತಾಡುವನು ಎಂದೂ ಆತನು ಹೇಳಿದನು (ಯೋಹಾನ 16:14). ಯೇಸುವಿನ ಮತ್ತು ಪರಿಶುದ್ಧಾತ್ಮನ ಬಗ್ಗೆ ಹೊಸ ಒಡಂಬಡಿಕೆಯಲ್ಲಿ ಕೊಡಲ್ಪಟ್ಟ ಮಾಹಿತಿಯು ಅವರಿಬ್ಬರು ಸ್ವತಂತ್ರವಾದ, ಪ್ರತ್ಯೇಕವಾದ ಪಾರಲೌಕಿಕ ವ್ಯಕ್ತಿಗಳು ಎಂಬುದನ್ನು ಸೂಚಿಸುತ್ತದೆ.

## ಆತನು ದೈವಿಕನು

ಪರಿಶುದ್ಧಾತ್ಮನು ತಂದೆ ಮತ್ತು ಕುಮಾರನೊಂದಿಗೆ ಅವರ ಸರಿಸಮಾನನಾಗಿ, ಅದೇ ಸ್ಥಿತಿಯುಳ್ಳವನಂತೆ ಹೇಳಲ್ಪಟ್ಟಿದ್ದಾನೆ. ಜನರು ತಂದೆ, ಕುಮಾರ ಮತ್ತು ಪರಿಶುದ್ಧಾತ್ಮನ ಹೆಸರಿನಲ್ಲಿ ಬಾಪ್ತಿಸ್ಮ ಮಾಡಲ್ಪಡಬೇಕು (ಮತ್ತಾಯ 28:19). ಆತನು, ದೇವರು ("ತಂದೆಯು"; 1 ಕೊರಿಂಥ 8:6), ಮತ್ತು ಕರ್ತನು ("ಯೇಸು"; 1 ಕೊರಿಂಥ 8:6) ಅತ್ಮಿಕ ವರಗಳನ್ನು ಕೊಡುವವರಾಗಿದ್ದಾರೆ (1 ಕೊರಿಂಥ 12:4-6), ಆತ್ಮನ ಚಿತ್ತದ ಪ್ರಕಾರ ಇವು ಕೊಡಲ್ಪಡುತ್ತವೆಯೆಂದು ಹೇಳಲ್ಪಟ್ಟಿದೆ (1 ಕೊರಿಂಥ 12:11). ಒಂದೇ ಸ್ಥಿತಿಯಿರುವವರಂತೆ ಮೂವರನ್ನು ಒಂದಾಗಿ, 2 ಕೊರಿಂಥ 13:14ರಲ್ಲಿ ಪೌಲನು ಹೇಳಿದ್ದಾನೆ: "ನಮ್ಮ ಕರ್ತನಾದ ಯೇಸು ಕ್ರಿಸ್ತನ ಕೃಪೆಯೂ ದೇವರ ಪ್ರೀತಿಯು ಪರಿಶುದ್ಧಾತ್ಮನ ಅನ್ಯೋನ್ಯತೆಯೂ ನಿಮ್ಮೆಲ್ಲರ ಸಂಗಡವಿರಲಿ."[8]

ಹೊಸ ಒಡಂಬಡಿಕೆಯಲ್ಲಿ ಪುರಾವೆಯು, ತಂದೆ, ಕುಮಾರ ಮತ್ತು ಪರಿಶುದ್ಧಾತ್ಮರು ಭಿನ್ನವಾದ, ಒಂದೇ ಸ್ವಭಾವದ ವ್ಯಕ್ತಿಗತ ಪಾರಲೌಕಿಕ ಜೀವಿಗಳಾಗಿದ್ದಾರೆಂಬುದು ಬಹಳವಾಗಿದೆ ಎಂಬಂತೆ ತೋರುತ್ತದೆ. ತಮ್ಮ ಸಂಬಂಧದಲ್ಲಿ ಒಬ್ಬರೊಂದಿಗೊಬ್ಬರು ಮತ್ತು ಮಾನವ ಕುಲಕ್ಕೆ ತಮ್ಮ ಸೇವೆಯಲ್ಲಿ ಒಂದಾಗಿ ಅವರು ಒಂದುಕೂಡಿಸಲ್ಪಟ್ಟಿದ್ದಾರೆ.

ದೈವತ್ವದಿಂದ ಮಾತ್ರ ಹೊಂದಿಕೊಂಡ ಲಕ್ಷಣಗಳು ಪರಿಶುದ್ಧಾತ್ಮನಿಗೆ ಹೋಲಿಸಲ್ಪಟ್ಟಿವೆ. ತಂದೆಯೊಂದಿಗೆ ಮತ್ತು ಕುಮಾರನೊಂದಿಗೆ ಆತನು ಹಂಚಿಕೊಳ್ಳುವ ಐದು ಗುಣಧರ್ಮಗಳನ್ನು ಗಮನಿಸಿರಿ:

1. *ನಿತ್ಯತ್ವ*: (1) ಪರಿಶುದ್ಧಾತ್ಮನ ನಿತ್ಯವಾದ ಸ್ವಭಾವವನ್ನು ಕುರಿತು ಬೈಬಲಿನ ಹೇಳಿಕೆಗಳು ಈ ಕೆಳಗಿರುತ್ತವೆ - "ನಿತ್ಯಾತ್ಮನಿಂದ ತನ್ನನ್ನು ತಾನೇ ನಿರ್ದೋಷಿಯನ್ನಾಗಿ ದೇವರಿಗೆ ಸಮರ್ಪಿಸಿಕೊಂಡ ಕ್ರಿಸ್ತನ ರಕ್ತವು ಎಷ್ಟೋ ಹೆಚ್ಚಾಗಿ ನಮ್ಮನ್ನು ನಿರ್ಜೀವ ಕ್ರಿಯೆಗಳಿಂದ ಬಿಡಿಸಿ ನಾವು ಜೀವವುಳ್ಳ ದೇವರನ್ನು ಆರಾಧಿಸುವವರಾಗುವಂತೆ ನಮ್ಮ ಮನಸ್ಸನ್ನು ಶುದ್ಧೀಕರಿಸುವದಲ್ಲವೇ?" (ಇಬ್ರಿಯ 9:14); (2) ತಂದೆ - "ಪೂರ್ವದಿಂದಲೂ ನಿನ್ನ ಸಿಂಹಾಸನವು ಸ್ಥಿರವಾಗಿದೆ; ಅನಾದಿಯಿಂದ ನೀನು ಇದ್ದೀ" (ಕೀರ್ತನೆ 93:2); ಮತ್ತು (3) ಯೇಸು - "ಯೇಸು ಕ್ರಿಸ್ತನು ನಿನ್ನೆ ಇದ್ದಹಾಗೆ ಈ ಹೊತ್ತು ಇದ್ದಾನೆ. ನಿರಂತರವೂ ಹಾಗೆಯೇ ಇರುವನು" (ಇಬ್ರಿಯ 13:8); "ಮತ್ತು ನಮ್ಮ ಕರ್ತನೂ ರಕ್ಷಕನೂ ಆಗಿರುವ ಯೇಸು ಕ್ರಿಸ್ತನ ನಿತ್ಯರಾಜ್ಯದಲ್ಲಿ ಪ್ರವೇಶಿಸುವ ಹಾಗೆ ದೇವರು ನಿಮಗೆ ಧಾರಾಳವಾಗಿ ಅನುಗ್ರಹಿಸುವನು" (2 ಪೇತ್ರ 1:11).

2. *ಸರ್ವಜ್ಞಾನ*: ಬೈಬಲ್ ವಾಕ್ಯಭಾಗಗಳಲ್ಲಿ ಈ ಗುಣವು ಹೇಳಲ್ಪಟ್ಟಿದೆ. (1) ಪರಿಶುದ್ಧಾತ್ಮನನ್ನು ಕುರಿತು "ನಮಗಾದರೋ ದೇವರು ತನ್ನ ಆತ್ಮನ ಮೂಲಕ ಅದನ್ನೂ ಪ್ರಕಟಿಸಿದನು. ಆ ಆತ್ಮನು ಎಲ್ಲಾ ವಿಷಯಗಳನ್ನು ದೇವರ ಅಗಾಧವಾದ ವಿಷಯಗ ಳನ್ನೂ ಕೂಡ ಪರಿಶೋಧಿಸುವವನಾಗಿದ್ದಾನೆ" (1 ಕೊರಿಂಥ 2:10); (2) ತಂದೆ - "ಆತನ ದೃಷ್ಟಿಗೆ ಸಮಸ್ತವೂ ಮುಚ್ಚು ಮರೆಯಿಲ್ಲದ್ದಾಗಿಯೂ ಬೈಲಾದದ್ದಾಗಿಯೂ ಅದೆ. ಆತನ ಸನ್ನಿಧಿಯಲ್ಲಿ ಅಗೋಚರವಾಗಿರುವ ಸೃಷ್ಟಿಯು

ಒಂದೂ ಇಲ್ಲ" (ಇಬ್ರಿಯ 4:13); (3) ಯೇಸು - "ಆದರೆ ಯೇಸು ಎಲ್ಲರನ್ನೂ ಬಲ್ಲವನಾದ್ದರಿಂದ ಅವರಿಗೆ ವಶವಾಗಲಿಲ್ಲ. ಆತನು ಪ್ರತಿ ಮನುಷ್ಯನ ಅಂತರ್ಯವನ್ನು ತಿಳಿದವನಾದ ಕಾರಣ ಯಾವನೂ ಯಾವ ಮನುಷ್ಯನ ವಿಷಯದಲ್ಲಿಯೂ ಆತನಿಗೆ ಸಾಕ್ಷಿಕೊಡಬೇಕಾದ ಅವಶ್ಯವಿರಲಿಲ್ಲ" (ಯೋಹಾನ 2:24, 25).

3. *ಸರ್ವಶಕ್ತಿ*: ಹಲವಾರು ಬೈಬಲ ವಾಕ್ಯಗಳು ಈ ಗುಣವನ್ನು ಸಂಬಂಧಿಸಿ ಹೇಳುತ್ತವೆ: (1) ಪರಿಶುದ್ಧಾತ್ಮ - "ನಿನ್ನ ಮೇಲೆ ಪರಿಶುದ್ಧಾತ್ಮ ಬರುವದು; ಪರಾತ್ಪರನ ಶಕ್ತಿಯ ನೆರಳು ನಿನ್ನ ಮೇಲೆ ಬೀಳುವುದು" (ಲೂಕ 1:35ಬಿ); "ತರುವಾಯ ಯೇಸು ಪರಿಶುದ್ಧಾತ್ಮನ ಶಕ್ತಿಯಿಂದ ಕೂಡಿದವನಾಗಿ ತಿರಿಗಿ ಗಲಿಲಾಯಕ್ಕೆ ಹೋದನು" (ಲೂಕ 4:14ಎ); "ಪರಿಶುದ್ಧಾತ್ಮ ನಿಮ್ಮ ಮೇಲೆ ಬರಲು ನೀವು ಬಲವನ್ನು ಹೊಂದುವಿರಿ" (ಅಪೊಸ್ತಲರ ಕೃತ್ಯಗಳು 1:8ಎ); (2) ದೇವರು - "ದೇವರೊಂದಿಗೆ ಅಸಾಧ್ಯವಾದದ್ದು ಯಾವುದೂ ಇಲ್ಲ" (ಲೂಕ 1:37); ಮತ್ತು (3) ಯೇಸು - "ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವು ನನಗೆ ಕೊಡಲ್ಪಟ್ಟಿದೆ" (ಮತ್ತಾಯ 28:18).

4. *ಸರ್ವವ್ಯಾಪಕತ್ವ*: ಈ ಗುಣಲಕ್ಷಣವು ಅನ್ವಯಿಸಲ್ಪಟ್ಟಿದೆ: (1) ಪರಿಶುದ್ಧಾತ್ಮನಿಗೆ - "ನಿನ್ನ ಆತ್ಮಕ್ಕೆ ತಪ್ಪಿಸಿಕೊಳ್ಳುವಂತೆ ಎಲ್ಲಿಗೆ ಹೋಗಲಿ?" (ಕೀರ್ತನೆ 139:7ಎ); (2) ತಂದೆಗೆ - "ದೇವರು ನಿಜವಾಗಿ ಭೂಲೋಕದಲ್ಲಿ ವಾಸಿಸುವನೋ? ಅಕಾಶವೂ ಉನ್ನತೋನ್ನತವಾದ ಆಕಾಶವೂ ನಿನ್ನ ವಾಸಕ್ಕೆ ಸಾಲವು" (1 ಅರಸುಗಳು 8:27ಎ); "ನನ್ನ ಕಣ್ಣಿಗೆ ಬೀಳದಂತೆ ಯಾವನಾದರೂ ಗುಪ್ತಸ್ಥಳಗಳಲ್ಲಿ ತನ್ನನ್ನು ಮರೆಮಾಡಿಕೊಂಡಾನೇ? ನಾನು ಭೂಮ್ಯಾಕಾಶಗಳಲ್ಲಿಯೂ ವ್ಯಾಪಿಸಿರುವವನಲ್ಲವೆ ಎಂದು ಕರ್ತನು ಹೇಳುತ್ತಾನೆ" (ಯೆರೆಮೀಯ 23:24); ಮತ್ತು (3) ಯೇಸುವಿಗೆ - "ಯುಗದ ಸಮಾಪ್ತಿಯ ವರೆಗೆ ಎಲ್ಲಾ ದಿವಸ ನಿಮ್ಮ ಸಂಗಡ ಇರುವೆನು" (ಮತ್ತಾಯ 28:20ಬಿ).

5. *ಸೃಷ್ಟಿಸುವ ಶಕ್ತಿ*: ದೇವತ್ವದ ಪ್ರತಿಯೊಬ್ಬ ಸದಸ್ಯನನ್ನು ಸೃಷ್ಟಿಕರ್ತನಂತೆ ಬೈಬಲ್ ವಾಕ್ಯಗಳು ಚಿತ್ರಿಸುತ್ತವೆ: (1) ಪರಿಶುದ್ಧಾತ್ಮ - "ಜಲ ಸಮೂಹಗಳ ಮೇಲೆ ದೇವರ ಆತ್ಮನು ಚಲಿಸುತ್ತಿದ್ದನು" (ಆದಿಕಾಂಡ 1:2)[9]; (2) ತಂದೆ - "ಆತನು ತನ್ನ ಶಕ್ತಿಯಿಂದ ಭೂಮಿಯನ್ನು ನಿರ್ಮಿಸಿ ತನ್ನ ಜ್ಞಾನದಿಂದ ಲೋಕವನ್ನು ಸ್ಥಾಪಿಸಿ ತನ್ನ ವಿವೇಕದಿಂದ ಆಕಾಶಮಂಡಲವನ್ನು ಹರಡಿದ್ದಾನೆ" (ಯೆರೆಮೀಯ 51:15); ಮತ್ತು (3) ಕುಮಾರ - "ಭೂಪರಲೋಕಗಳಲ್ಲಿರುವ ದೃಶ್ಯಾದೃಶ್ಯವಾದವುಗಳೆಲ್ಲವೂ ಸಿಂಹಾಸನಗಳಾಗಲಿ ಪ್ರಭುತ್ವಗಳಾಗಲಿ ಧೊರೆತನಗಳಾಗಲಿ ಅಧಿಕಾರಗಳಾಗಲಿ ಆತನಲ್ಲಿ ಸೃಷ್ಟಿಸಲ್ಪಟ್ಟವು. ಸರ್ವವು ಆತನ ಮುಖಾಂತರವಾಗಿಯೂ ಆತನಿಗೋಸ್ಕರವಾಗಿಯೂ ಸೃಷ್ಟಿಸಲ್ಪಟ್ಟಿತು" (ಕೊಲೊಸ್ಸೆ 1:16).

## ಮುಕ್ತಾಯ

ದೈವತ್ವಕ್ಕೆ ಮಾತ್ರವೇ ಅನ್ವಯಿಸಲ್ಪಡುವ ಮಾತುಗಳಲ್ಲಿ ಪರಿಶುದ್ಧಾತ್ಮನು ವಿವರಿಸಲ್ಪಟ್ಟಿದ್ದಾನೆ. ಈ ಮಾತುಗಳಿಂದ ಪರಿಶುದ್ಧಾತ್ಮನು ತಂದೆಯೊಂದಿಗೂ ಕುಮಾರನೊಂದಿಗೂ ದೈವಿಕ ಸ್ವಭಾವವನ್ನು ಹಂಚಿಕೊಳ್ಳುತ್ತಾನೆ ಮತ್ತು ತಂದೆಯೊಂದಿಗೂ ಕುಮಾರನೊಂದಿಗೂ ಒಂದಾಗಿದ್ದಾನೆ ಆದರೆ ಆತನು ಭಿನ್ನವಾದ ವ್ಯಕ್ತಿತ್ವವುಳ್ಳವನಾಗಿದ್ದಾನೆ ಎಂದು ತೀರ್ಮಾನಿಸಬಹುದು. ಆತನು ಮಹತ್ವವುಳ್ಳ, ಬೈಬಲಿನ ಕೇಂದ್ರ ವ್ಯಕ್ತಿಯಾಗಿದ್ದಾನೆ.

ಟಿಪ್ಪಣಿಗಳು

[1]Emmet Russell, "Holy Spirit," *The New International Dictionary of the Bible*, eds. J. D. Douglas and Merrill C. Tenney (Grand Rapids, Mich.: Zondervan, 1987), 447. [2]James Oliver Buswell Jr., "Spirit," *The New International Dictionary of the Bible*, eds. J. D. Douglas and Merrill C. Tenney (Grand Rapids, Mich.: Zondervan, 1987), 961. [3]Guy N. Woods, *A Commentary on the Gospel According to John* (Nashville: Gospel Advocate Co., 1984), 63. [4]Archibald Thomas Robertson, *Word Pictures in the New Testament*, vol. 5 (New York: Harper & Brothers, 1932), 252. [5]Marvin R. Vincent, *Word Studies in the New Testament*, vol. 2 (Grand Rapids, Mich.: Wm. B. Eerdmans Publishing Co., 1946), 47. [6]Ibid., 244. [7]William Hendriksen, *Exposition of the Gospel According to John*, New Testament Commentary (Grand Rapids, Mich.: Baker Book House, 1972), 275. [8]ಮತ್ತಾಯ 3:16, 17; ಯೋಹಾನ 3:34; 14:26; 15:26; 16:15; ರೋಮಾಪುರ 14:17, 18; 15:16; 1 ಕೊರಿಂಥ 6:11; 2 ಕೊರಿಂಥ 3:3; ಗಲಾತ್ಯ 4:6; ಎಫೆಸ 2:18, 20-22; 4:4-6; 5:18-20; 2 ಥೆಸಲೊನೀಕ 2:13; ಇಬ್ರಿಯ 9:14; 1 ಪೇತ್ರ 1:2; ಯೂದ 20, 21. [9]ಪರಿಶುದ್ಧಾತ್ಮನು ಸೃಷ್ಟಿಯಲ್ಲಿ ಸಹಾಯ ಮಾಡಿದನೆಂಬುದನ್ನು ತೋರಿಸಲು ಕೆಲವರಿಂದ ಇತರ ವಾಕ್ಯಗಳು ಉಪಯೋಗಿಸಲ್ಪಟ್ಟಿವೆ; ಹಾಗಿದ್ದರೂ ಇವು ಬಲವಾದ ಪುರಾವೆಯಂತೆ ಕೊರತೆಯುಳ್ಳವುಗಳಾಗಿ ತೋರುತ್ತವೆ. ಯೋಬ 26:13ರ ಹೆಚ್ಚಾದ ಭಾಷಾಂತರಗಳು ಸೃಷ್ಟಿಗೆ ಅನ್ವಯಿಸಬಹುದಾದಂಥ ಹೇಳಿಕೆಯನ್ನು ಒಳಗೊಂಡಿರುವದಿಲ್ಲ. ಯೋಬ 27:3; ಯೆಶಾಯ 40:12, 13; ಕೀರ್ತನೆ 33:6 ವಚನಗಳ ಭಾಷಾಂತರಗಳ ಬಗ್ಗೆ ಅದೇ ಸತ್ಯವಾಗಿದ್ದು, ವಾಕ್ಯಗಳು ಕೆಲವು ಸಲ ಸೃಷ್ಟಿಯೊಂದಿಗೆ ಆತ್ಮನು ಸಹಾಯ ಮಾಡಿದನೆಂಬುದಕ್ಕೆ ರುಜುವಾತಾಗಿ ಉಪಯೋಗಿಸಲ್ಪಟ್ಟಿವೆ, ಕೀರ್ತನೆ 104:30 ಪದ್ಯವಾಗಿ ನವೀಕರಣತ್ತೆ ಮಾತ್ರವೇ ಉಲ್ಲೇಖಿಸಲ್ಪಡಬಹುದು ಆದರೆ ಮೂಲ ಸೃಷ್ಟಿಗೆ ಅಲ್ಲ.

## ಕ್ರೈಸ್ತರಲ್ಲಿ ಪರಿಶುದ್ಧಾತ್ಮನ ಕಾರ್ಯ

1. ಪಾಪ ಮತ್ತು ಮರಣದ ನಿಯಮದಿಂದ ನಮ್ಮನ್ನು ಬಿಡುಗಡೆ ಮಾಡುವನು (ರೋಮಾಪುರ 8:2-8).
2. ನಮ್ಮ ಪುನರುತ್ಥಾನವನ್ನು ತರುವನು (ರೋಮಾಪುರ 8:11).
3. ನಮ್ಮ ಪ್ರಾರ್ಥನೆಗಳಲ್ಲಿ ಸಹಾಯ ಮಾಡುವನು (ರೋಮಾಪುರ 8:26; ಎಫೆಸ 6:18).
4. ಆತನು ನಮ್ಮ ಪರವಾಗಿ ವಿಜ್ಞಾಪನೆ ಮಾಡುವನು (ರೋಮಾಪುರ 8:26, 27).
5. ಆತನು ನಮ್ಮನ್ನು ನಡಿಸುವನು (ರೋಮಾಪುರ 8:14).
6. ವಿಮೋಚನೆಯ ದಿನಕ್ಕಾಗಿ ಒಪ್ಪಂದದಂತೆ ಮುದ್ರೆ ಹಾಕುವನು (2 ಕೊರಿಂಥ 1:22; ಎಫೆಸ 1:13, 14; 4:30).
7. ಆತನು ನಮ್ಮೊಂದಿಗೆ ಅನ್ಯೋನ್ಯತೆಯಿಂದಿರುವನು (2 ಕೊರಿಂಥ 13:4).
8. ತಂದೆಯ ಬಳಿಗೆ ಪ್ರವೇಶಿಸುವದಕ್ಕೆ ನಮಗೆ ಮಾರ್ಗ ಮಾಡಿ ಕೊಡುವನು (ಎಫೆಸ 2:18).
9. ಆಂತರ್ಯದಲ್ಲಿ ಬಲವನ್ನು ಒದಗಿಸಿಕೊಡುವನು (ಎಫೆಸ 3:16).
10. ಆತನು ಐಕ್ಯತೆಯನ್ನು ತರುವನು (ಎಫೆಸ 4:3).
11. ಆತನು ನಮ್ಮನ್ನು ಶುದ್ಧೀಕರಿಸುವನು (2 ಥೆಸಲೊನೀಕ 2:13).

© 2009 Truth for Today